# ಆನೆ

■ ರಾಜಶೇಖರ ಕುಕ್ಕುಂದಾ

ಆನೆ ಹೊಟ್ಟೆ ದೊಡ್ಡದು
ಅದರ ಬಾಲ ಗಿಡ್ಡದು
ಕಣ್ಣು ಬಹಳ ಸಣ್ಣದು
ಚರ್ಮ ಬೂದು ಬಣ್ಣದು

ಉದ್ದದೊಂದು ಸೊಂಡಿಲು
ದಿಮ್ಮಿ ಎತ್ತಿಕೊಳ್ಳಲು
ಅಗಲ ಅಗಲ ಕಿವಿಗಳು
ಗಾಳಿ ಬೀಸಿಕೊಳ್ಳಲು

ಆನೆ ಬರಲಿ ಊಟಕೆ
ದಿನವು ನಮ್ಮ ತೋಟಕೆ
ಕಬ್ಬು ತಂದು ಇಡುವೆನು
ಹಲಸು ತಂದು ಕೊಡುವೆನು

ಆನೆ ಮೇಲೆ ಹತ್ತುವೆ
ಕಾಡನೆಲ್ಲ ಸುತ್ತುವೆ
ದೇಹವೆಲ್ಲ ದಣಿಯಲಿ
ಮನಸು ಹಿಗ್ಗಿ ಕುಣಿಯಲಿ!



## ಕುಂಚ ಪ್ರಪಂಚ





**ಪೂಜಾ ಎಂ. ವಾಲಿಕಾರ್**
9ನೇ ತರಗತಿ, ಮಾತಾಶ್ರೀ
ಬಸಲಿಂಗಮ್ಮ ಸ್ಕೂಲ್, ಕುಂದರಗಿ,
ಬೀಳಗಿ



**ಶನಯಾ ಎಚ್.**
1ನೇ ತರಗತಿ, ಬಿಷಪ್ ಕಾಟನ್ ಸ್ಕೂಲ್
ಬೆಂಗಳೂರು





**ಧನಿಕ ಕೆ. ಪಟೇಲ್**
7ನೇ ತರಗತಿ,
ಹಾಸನ ಪಬ್ಲಿಕ್ ಶಾಲೆ,
ಹಾಸನ

